ಶ್ರೀ ದಿನೇಶ್ ಗುಂಡೂರಾವ್ (ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು)

ಅ) ವಿಜಾಪುರ (ನಗರ) ಮತಕ್ಷೇತ್ರದ ವ್ಯಾಪ್ತಿಯಲ್ಲಿ 8,053 ಎಪಿಎಲ್ ಪಡಿತರ ಚೀಟಿದಾರರಿರುತ್ತಾರೆ.

ಆ) ಎ.ಪಿ.ಎಲ್. ಪಡಿತರ ಚೀಟಿದಾರರಿಗೆ ಆಹಾರ ಧಾನ್ಯ ವಿತರಣೆ ಮಾಡುವ ಪ್ರಸ್ತಾವನೆ ಇಲ್ಲ.

ಇ) ಅನ್ವಯಿಸುವುದಿಲ್ಲ.

ಎಂಡೋಸಲ್ಫಾನ್ ಪೀಡಿತರು

2826 (3742), ಶ್ರೀ ಮೋಹಿಯುದ್ದೀನ್ ಬಾವಾ ಬಿ.ಎ. (ಮಂಗಳೂರು ನಗರ ಉತ್ತರ)

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಎಂಡೋಸಲ್ಫಾನ್ ಪೀಡಿತರ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ಒದಗಿಸುವುದು);

ಆ) ಹಾಗಿದ್ದಲ್ಲಿ, ಈ ಕಾಯಿದೆಯಿಂದ ಬಳಲುತ್ತಿರುವವರಿಗೆ ಯಾವ ರೀತಿಯ ಸಾಮಾಜಿಕ ಭದ್ರತೆಯನ್ನು ಸರ್ಕಾರ ಒದಗಿಸಿದೆ;

ಇ) 24 ಗಂಟೆಯೂ ಕಾರ್ಯಾಚರಣೆ ನಡೆಸುವ 'ಡೇ ಕೇರ್ ಸೆಂಟರ್' ನಂತಹ ಪುನರ್ ವಸತಿ ಕೇಂದ್ರವನ್ನು ಪ್ರಾರಂಭಿಸುವ ಯೋಚನೆ ಸರ್ಕಾರಕ್ಕಿದೆಯೇ;

ಈ) ಎಂಡೋಸಲ್ಫಾನ್, ಪೀಡಿತ ಮಕ್ಕಳನ್ನು ನೋಡಿಕೊಳ್ಳುವ ತಾಯಂದಿರಿಗೆ ಮಾಸಾಶನ ನೀಡುವ ಯೋಚನೆ ಸರ್ಕಾರದ ಮುಂದಿದೆಯೇ;

ಊ) ಹಾಗಿದ್ದಲ್ಲಿ, ಎಂಡೋಸಲ್ಫಾನ್ ಪೀಡಿತರಿಗೆ ಈಗ ನೀಡುತ್ತಿರುವ ಮಾಸಾಶನವನ್ನು ಹೆಚ್ಚಿಸಲು ಸರ್ಕಾರ ಕ್ರಮಕೈಗೊಳ್ಳುವುದೇ; ಎಂದಿನಿಂದ ಜಾರಿಗೊಳಿಸಲಾಗುವುದು?

ಶ್ರೀ ಯು.ಟಿ.ಖಾದರ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಎಂಡೋಸಲ್ಫಾನ್ ಪೀಡಿತರ ತಾಲ್ಲೂಕುವಾರು ವಿವರಗಳು ಈ ಕೆಳಗಿನಂತಿವೆ:

ತಾಲ್ಲೂಕು	ಎಂಡೋಸಲ್ಫಾನ್ ಪೀಡಿತರ ಸಂಖ್ಯೆ
ಮಂಗಳೂರು	33
ಬಂಟ್ವಾಳ	345
ಬೆಳ್ತಂಗಡಿ	992
ಪುತ್ತೂರು	1421
ಸುಳ್ಯ	205
ಒಟ್ಟು	**2996**

ಆ) 1) ಎಂಡೋಸಲ್ಫಾನ್ ಸಿಂಪಡಿಸಿರುವ ಪ್ರದೇಶಗಳಲ್ಲಿ ಆಗಿರುವ ದುಷ್ಪರಿಣಾಮಗಳ ಬಗ್ಗೆ ಎಂಡೋಸಲ್ಫಾನ್ ಸಂತ್ರಸ್ತರ ಸಮೀಕ್ಷೆ ಹಾಗೂ ವಿಶೇಷ ತಜ್ಞ ವೈದ್ಯರುಗಳ ಶಿಬಿರ ನಡೆಸಿ, ಎಂಡೋಸಲ್ಫಾನ್ ಭಾದಿತರನ್ನು ಗುರುತಿಸಲಾಗಿರುತ್ತದೆ.

2) ಮಾನ್ಯ ಉಚ್ಚ ನ್ಯಾಯಾಲಯ ಹಾಗೂ ಘನ ಕರ್ನಾಟಕ ಆದೇಶದಂತೆ ಶೇ.25 ರಿಂದ ಶೇ.60ರ ವರಗೆ ಎಂಡೋಸಲ್ಫಾನ್ ವಿಕಲಚೇತನ ಎಂದು ಗುರುತಿಸಲ್ಪಟ್ಟವರಿಗೆ ಮಾಸಿಕ ₹ 1,500.00 ಗಳ ಮಿತವೇತನ (ಸ್ಟೈಪೆಂಡ್) ಮತ್ತು ಶೇ.60 ಕ್ಕಿಂತ ಮೇಲ್ಪಟ್ಟು ಎಂಡೋಸಲ್ಫಾನ್ ವಿಕಲಚೇತನ (ಸ್ಟೈಪೆಂಡ್)ನ್ನು (ಇತರೆ ಯೋಜನೆಗಳಲ್ಲಿ ನೀಡುತ್ತಿರುವ

ಪಿಂಚಣಿಯನ್ನು ಒಳಗೊಂಡಂತೆ) ಪ್ರತಿ ತಿಂಗಳು ಸಂತ್ರಸ್ತರ ಖಾತೆಗೆ ಆರ್.ಟಿ.ಜಿ.ಎಸ್. ಮುಖಾಂತರ ಪಾವತಿಸಲಾಗುತ್ತಿದೆ.

3) ಬಿಟ್ಟು ಹೋದ ಸಂತ್ರಸ್ತರನ್ನು ಸೇರ್ಪಡೆಗೊಳಿಸಲು ವಿಶೆಷ ತಜ್ಞರ ಶಿಬಿರಗಳನ್ನು ನಡೆಸಿ, ಗುರುತಿಸಿ ಎಂಡೋಸಲ್ಫಾನ್ ಸಂತ್ರಸ್ತರ ಪಟ್ಟಿಗೆ ಸೇರಿಸಲಾಗುತ್ತಿದೆ.

4) ಎಲ್ಲಾ ಎಂಡೋಸಲ್ಫಾನ್ ಸಂತ್ರಸ್ತರಿಗೆ ಗುರುತಿನ ಚೀಟಿ ವಿತರಿಸಲಾಗಿದೆ.

5) ಮೊಬೈಲ್ ಹೆಲ್ತ್ ಯುನಿಟ್ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯಾಧಿಕಾರಿಗಳಿಂದ ಹಾಸಿಗೆ ಹಿಡಿದ ಸಂತ್ರಸ್ತರಿಗೆ ಅವರವರ ಮನೆಯಲ್ಲಿಯೇ ಹಾಸಿಗೆ ಮೇಲೆಯೇ ಚಿಕಿತ್ಸೆ ನೀಡಲಾಗುತ್ತಿದೆ.

6) ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಅಲಂಕಾರು (ಕ್ಯೊಲ) ಮತ್ತು ಬೆಳ್ತಂಗಡಿ ತಾಲೂಕಿನ ಕೊಕ್ಕಡದಲ್ಲಿ ಪಾಲನಾ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಗಂಭೀರ ಕಾಯಿಲೆಗಳ ಸಂತ್ರಸ್ತರು ಇದರ ಸದುಪಯೋಗವನ್ನು ಪಡೆದುಕೊಳ್ಳುತ್ತಿದ್ದಾರೆ.

7) ಎಂಡೋಸಲ್ಫಾನ್ ಸಂತ್ರಸ್ತರ ಚಿಕಿತ್ಸೆಗಾಗಿ ಪ್ರತಿ ತಿಂಗಳು ಸಂತ್ರಸ್ತರು ಹೆಚ್ಚಾಗಿರುವ ಏಳು ಆರೋಗ್ಯ ಕೇಂದ್ರಗಳಲ್ಲಿ ಖಾಸಗಿ ವೈದ್ಯಕೀಯ ಕಾಲೇಜುಗಳ ಸಹಯೋಗದೊಂದಿಗೆ ವಿಶೇಷ ತಜ್ಞರ ಶಿಬಿರಗಳನ್ನು ನಡೆಸಲಾಗುತ್ತಿದೆ.

8) ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯ ಉಪಕೇಂದ್ರಗಳಲ್ಲಿರುವ ಮಹಿಳಾ ಆರೋಗ್ಯ ಸಹಾಯಕಿಯರು ಅವರವರ ಕ್ಷೇತ್ರದ ಸಂತ್ರಸ್ತರ ಬಗ್ಗೆ ನಿಗಾ ವಹಿಸಿ ಅವಶ್ಯ ಚಿಕಿತ್ಸೆಗಳನ್ನು ನೀಡುತ್ತಿದ್ದಾರೆ.

9) ಸಂತ್ರಸ್ತರಿಗೆ ಸಂಚಾರಿ ಆರೋಗ್ಯ ಘಟಕದ ಸೇವೆಗಳನ್ನು ನೀಡಲಾಗುತ್ತಿದೆ.

10) ಎಂಡೋಸಲ್ಫಾನ್ ಸಂತ್ರಸ್ತರಿಗೆ ಉಚಿತ ಆಹಾರ (Free ration) ನೀಡುವ ಬಗ್ಗೆ ಉಪನಿರ್ದೇಶಕರು, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ದಕ್ಷಿಣ ಕನ್ನಡ ಜಿಲ್ಲೆ ಇವರಿಗೆ ಪತ್ರ ಬರೆಯಲಾಗಿದೆ.

11) ಎಂಡೋಸಲ್ಫಾನ್ Genetic Studies Research ಮಾಡುವ ಬಗ್ಗೆ ಸರ್ಕಾರದ ವತಿಯಿಂದ ಕೆ.ಎಸ್.ಹೆಗ್ಡೆ, ಮೆಡಿಕಲ್ ಅಕಾಡೆಮಿ, ಮಂಗಳೂರು–ಇದನ್ನು ಆಯ್ಕೆ ಮಾಡಲಾಗಿದೆ. ಜಿಲ್ಲೆಯ 6 ವೈದ್ಯಕೀಯ ಮಹಾವಿದ್ಯಾಲಯ ಮತ್ತು 1 ಖಾಸಗಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯೊಂದಿಗೆ ಒಡಂಬಡಿಕೆ ಮಾಡಿಕೊಂಡು ಎಂಡೋಸಲ್ಫಾನ್ ಸಂತ್ರಸ್ತರಿಗೆ ವಿಶೇಷ ತಜ್ಞರಿಂದ ನಗದು ರಹಿತ ಚಿಕಿತ್ಸೆ ನೀಡಲು ಕ್ರಮ ಕೈಗೊಳ್ಳಲಾಗಿದೆ.

12) ಪುತ್ತೂರು ತಾಲೂಕಿನ ಅಲಂಕಾರು ಗ್ರಾಮದಲ್ಲಿ 5 ಎಕರೆ ಸ್ಥಳವನ್ನು ಎಂಡೋಸಲ್ಫಾನ್ ಸಂತ್ರಸ್ತರಿಗೆ ಶಾಶ್ವತ ಪುನರ್ವಸತಿ ಕೇಂದ್ರಕ್ಕಾಗಿ ಕಾದಿರಿಸಲಾಗಿದ್ದು, ಸದ್ರಿ ಸ್ಥಳದಲ್ಲಿ ಸುಸಜ್ಜಿತ ಕಟ್ಟಡವನ್ನು ನಿರ್ಮಾಣ ಮಾಡುವುದರೊಂದಿಗೆ ಎಂಡೋಸಲ್ಫಾನ್ ಸಂತ್ರಸ್ತರಿಗೆ ವಿವಿಧ ರೀತಿಯ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಇಲ್ಲ

ಈ) ಇಲ್ಲ

ಉ) ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.